ನ-330
ಕ್ರಿ-19-ಕಂಪ್ಯೂಟರ್

**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಪುಟ್ಟಣ್ಣ ಇವರು ನಿಯಮ-330 ರಡಿಯಲ್ಲಿ ನೀಡಿರುವ ಸೂಚನಾ ಪತ್ರಕ್ಕೆ ಮುಖ್ಯಮಂತ್ರಿಯವರ ಹೇಳಿಕೆ.**

ಪ್ರಶ್ನೆ:-

ಕರ್ನಾಟಕ ಆದಾಯ ತೆರಿಗೆ ಇಲಾಖೆ ಗೃಹ ನಿರ್ಮಾಣ ಸಹಕಾರ ಸಂಘ ಎಂಬ ಸಂಘದ ಹೆಸರಿನಲ್ಲಿ ಬೆಂಗಳೂರು ನಗರದ ಹಲವಾರು ಕಡೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಅಕ್ರಮವಾಗಿ ಹಾಗೂ ಕಾನೂನು ಬಾಹಿರವಾಗಿ ಸಗಟು ಹಂಚಿಕೆ ಹೆಸರಿನಲ್ಲಿ ಬೆಂಗಳೂರು ನಗರದ ಹೆಚ್ಚು ಅಭಿವೃದ್ಧಿ ಹೊಂದಿರುವ ಬಡಾವಣೆಗಳಲ್ಲಿ ನೂರಾರು ಕೋಟಿ ಬೆಲೆ ಬಾಳುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಸ್ತಿಯನ್ನು ಸಗಟು ಹಂಚಿಕೆ ಹಾಗೂ ಬಿಡಿ ನಿವೇಶನಗಳನ್ನು ಈ ಸಂಘದವರಿಗೆ ಹಂಚಿಕೆ ಮಾಡಿಕೊಡಲಾಗಿದೆ. ಈ ಸಂಘದ ಹೆಸರಿನಲ್ಲಿ ಪಟ್ಟಭದ್ರ ಹಿತಾಸಕ್ತಿಗಳು ಹಾಗೂ ಭೂ ಕಬಳಿಕಾದಾರರು ಸೇರಿಕೊಂಡು ಅಕ್ರಮ ನಡೆಸಿರುವ ಭೂ ಕಬಳಿಕೆದಾರರು ಹಾಗೂ ಈ ಸಹಕಾರ ಸಂಘ ಹೆಸರಿನಲ್ಲಿ ನಡೆದಿರುವ ಅಕ್ರಮಗಳ ಬಗ್ಗೆ ಟಿ.ವಿ-9 ಸುದ್ದಿ ವಾಹಿನಿಯಲ್ಲಿ ವಿವರವಾಗಿ ವರದಿ ಬಂದಿದೆ. ಆದರೂ ಸಹ ಈ ಸಂಘದ ಅಕ್ರಮಗಳ ಬಗ್ಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಯಾವುದೇ ತನಿಖೆ ಮಾಡದೆ ಇದೇ ಸೊಸೈಟಿ ಹೆಸರಿನಲ್ಲಿ ದಿ:14.07.2021 ರಂದು ಬೆಂಗಳೂರು ದಕ್ಷಿಣ ತಾಲ್ಲೂಕು ಉತ್ತರಹಳ್ಳಿಯ ಸರ್ವೆ ನಂ.89 ರಲ್ಲಿ ಸುಮಾರು 1 ಎಕರೆ 38 ಗುಂಟೆ ಜಮೀನನ್ನು ಹಾಗೂ ಇದರ ಜೊತೆಗೆ ಇನ್ನು ಹಲವು ಅಭಿವೃದ್ಧಿ ಹೊಂದಿರುವ ಬಡಾವಣೆಗಳಲ್ಲಿ ನಿವೇಶನಗಳನ್ನು ನೊಂದಣಿ ಮಾಡಲಾಗಿದೆ.

ಈ ಸಹಕಾರ ಸಂಘಕ್ಕೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಮಂಜೂರು ಮಾಡಿರುವ ನಿವೇಶನ ಹಾಗೂ ಜಮೀನುಗಳನ್ನು ಸಂಘದ ಸದಸ್ಯರಲ್ಲದ ಅನ್ಯ ವ್ಯಕ್ತಿಗಳಿಗೆ ದುಬಾರಿ ಬೆಲೆಗೆ ಮಾರಾಟವನ್ನು ಮಾಡಿ ಕೋಟ್ಯಂತರ ರೂಪಾಯಿಗಳ ಅವ್ಯವಹಾರ ನಡೆಸಿರುತ್ತಾರೆ. ಈ ಸಂಘದ ಅಕ್ರಮ ನಿವೇಶನ ಹಂಚಿಕೆಯಲ್ಲಿ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಹಾಗೂ ಭೂಕಬಳಿಕೆದಾರರ ಜೊತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಎಲ್ಲ ಹಂತದ ಅಧಿಕಾರಿಗಳು ಭಾಗಿಯಾಗಿರುವುದಾಗಿ ಆಯುಕ್ತರಿಗೆ ತನಿಖೆ ನಡೆಸುವಂತೆ ಸರ್ಕಾರಕ್ಕೆ ಎ.ಸಿ.ಬಿ.ಗೆ ಪತ್ರ ಬರೆದಿರುತ್ತಾರೆ. ಆದ್ದರಿಂದ ಕರ್ನಾಟಕ ಆದಾಯ ತೆರಿಗೆ ಇಲಾಖೆ ಗೃಹ ನಿರ್ಮಾಣ ಸಹಕಾರ ಸಂಘ ಎಂಬ ಹೆಸರಿನಲ್ಲಿ ನಡೆದಿರುವ ಅಕ್ರಮಗಳ ಬಗ್ಗೆ ಸಿ.ಬಿ.ಐ ತನಿಖೆ ನಡೆಸಿ ಅಕ್ರಮದಲ್ಲಿ ಭಾಗಿಯಾಗಿರುವವರ ಮೇಲೆ ಕ್ರಿಮಿನಲ್ ಕೇಸ್ ದಾಖಲಿಸಿ ಇವರ ಜೊತೆ ಶಾಮೀಲಾಗಿರುವ ಬಿಡಿಎ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಕೈಗೊಂಡು ಈ ಸಂಘಕ್ಕೆ ಮಂಜೂರು ಮಾಡಿರುವ ಖಾಲಿ ಜಾಗಗಳನ್ನು / ನಿವೇಶನಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ವಾಪಸ್ ಪಡೆಯಬೇಕೆಂಬ ಕುರಿತು.

ಉತ್ತರ:-

ಮೈಸೂರು ಆದಾಯ ತೆರಿಗೆ ಇಲಾಖೆ ಗೃಹ ನಿರ್ಮಾಣ ಸಹಕಾರ ಸಂಘದವರು ಮಾಳಗಾಳ ಗ್ರಾಮದ ಸರ್ವೆ ನಂ.5 ಮತ್ತು 10 ಹಾಗೂ ನಾಗರಭಾವಿ ಗ್ರಾಮದ ಸರ್ವೆ ನಂ.73 ಮತ್ತು 94 ರಲ್ಲಿ ಖರೀದಿಸಿದ್ದ 32 ಎಕರೆ 09 ಗುಂಟೆ ಜಮೀನನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ನಾಗರಭಾವಿ ಬಡಾವಣೆಗಾಗಿ ಭೂಸ್ವಾಧೀನಪಡಿಸಿಕೊಂಡಿದ್ದರ ಹಿನ್ನೆಲೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ : ವನಇ / 587/ ಎಂ.ಎನ್.ಎಕ್ಸ್/ 87 ದಿನಾಂಕ:06.01.1989 ರನ್ವಯ ಹಾಗೂ ಪ್ರಾಧಿಕಾರದ ಸಭೆಯ ದಿನಾಂಕ:27.09.2014 ಮುಂದೂಡಲಾದ ವಿಷಯ ಸಂಖ್ಯೆ:56/2014 ರ ತೀರ್ಮಾನದಂತೆ, ಕರ್ನಾಟಕ ಆದಾಯ ತೆರಿಗೆ ಇಲಾಖೆ ಗೃಹ ನಿರ್ಮಾಣ ಸಹಕಾರ ಸಂಘದವರ ಪರವಾಗಿ 13 ಎಕರೆ ಜಮೀನನ್ನು ಪ್ರಾಧಿಕಾರವು ನಿರ್ಧರಿಸುವ ದರವನ್ನು ಪಾವತಿಸುವ ಷರತ್ತಿಗೊಳಪಡಿಸಿ ಸಗಟು ಹಂಚಿಕೆ ಮಾಡಲು ನಿರ್ಣಯಿಸಲಾಗಿತ್ತು. ಪ್ರಸ್ತಾಪಿತ ಜಮೀನು ಲಭ್ಯವಿಲ್ಲದಿದ್ದಲ್ಲಿ ಸಮಾನಾಂತರ ಬಡಾವಣೆಗಳಲ್ಲಿ ಬದಲಿ ಜಮೀನನ್ನು ಗುರ್ತಿಸಿ ಹಂಚಿಕೆ ಮಾಡಲು ತೀರ್ಮಾನಿಸಲಾಗಿರುತ್ತದೆ.

..2ಕ್ಕೆ

ಸರ್ಕಾರದ ಆದೇಶದಂತೆ ಮತ್ತು ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಕರ್ನಾಟಕ ಆದಾಯ ತೆರಿಗೆ ಇಲಾಖೆ ಗೃಹ ನಿರ್ಮಾಣ ಸಹಕಾರ ಸಂಘದ ಪರವಾಗಿ ಗೌರವ ಕಾರ್ಯದರ್ಶಿಯವರಿಗೆ ಪ್ರಾಧಿಕಾರದಿಂದ ಈವರೆವಿಗೂ ವಿವಿಧ ಬಡಾವಣೆಗಳಲ್ಲಿ ಒಟ್ಟು 13 ಎಕರೆ ಜಮೀನನ್ನು ಹಂಚಿಕೆ ಮಾಡಿ ಶುದ್ಧಕ್ರಯ ಪತ್ರಗಳನ್ನು ನೊಂದಾಯಿಸಿಕೊಟ್ಟು ಸ್ವಾಧೀನ ಪತ್ರಗಳನ್ನು ದಿನಾಂಕ:07.07.2015 ರಿಂದ 15.05.2019 ರ ಅವಧಿಯಲ್ಲಿ ನೀಡಲಾಗಿರುತ್ತದೆ.

ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ಉತ್ತರಹಳ್ಳಿ ಗ್ರಾಮದ ಸರ್ವೆ ನಂ.89 ರಲ್ಲಿನ 02 ಎಕರೆ 21 ಗುಂಟೆ ಜಮೀನನ್ನು ಬನಶಂಕರಿ 5ನೇ ಹಂತದ ಬಡಾವಣೆ ರಚಿಸುವ ಸಲುವಾಗಿ ದಿನಾಂಕ:29.12.1988 ರಂತೆ ಭೂಸ್ವಾಧೀನಪಡಿಸಿಕೊಳ್ಳಲಾಗಿರುತ್ತದೆ.

ಸದರಿ ಜಮೀನು ಹಾಲಿ ಭೌತಿಕವಾಗಿ ಖಾಲಿಯಿದ್ದುದರಿಂದ ರಸ್ತೆ ನಿರ್ಮಾಣವಾಗಿರುವ ಜಾಗವನ್ನು ಹೊರತುಪಡಿಸಿ ಉಳಿದ 01 ಎಕರೆ 20 ಗುಂಟೆ ಜಮೀನನ್ನು ಕರ್ನಾಟಕ ಆದಾಯ ತೆರಿಗೆ ಇಲಾಖೆ ಗೃಹ ನಿರ್ಮಾಣ ಸಹಕಾರ ಸಂಘದ ಗೌರವ ಕಾರ್ಯದರ್ಶಿರವರಿಗೆ ಬದಲಿ ಜಾಗವನ್ನಾಗಿ ಹಂಚಿಕೆ ಮಾಡುವ ಬಗ್ಗೆ ಜಾಗವನ್ನು ಗುರ್ತಿಸಿ ಖಚಿತ ಅಳತೆ ವರದಿಯೊಂದಿಗೆ, ಪ್ರಸ್ತುತ ಹಾಲಿ ಸ್ಥಳದಲ್ಲಿ ಈ ಜಮೀನು ಭೌತಿಕವಾಗಿ ಖಾಲಿಯಿರುತ್ತದೆ ಎಂದು ವಸ್ತುಸ್ಥಿತಿ ವರದಿಯೊಂದಿಗೆ ಕಾರ್ಯಪಾಲಕ ಅಭಿಯಂತರರು (ದಕ್ಷಿಣ) ರವರು ವರದಿ ನೀಡಿರುತ್ತಾರೆ.

ಹಾಗೂ ಬೆಂಗಳೂರು ದಕ್ಷಿಣ ತಾಲ್ಲೂಕು ಉತ್ತರಹಳ್ಳಿ ಹೋಬಳಿ, ಉತ್ತರಹಳ್ಳಿ ಗ್ರಾಮದ ಸರ್ವೆ ನಂ.89 ಬನಶಂಕರಿ 5ನೇ ಹಂತ ಬಡಾವಣೆಯ 01 ಎಕರೆ 20 ಗುಂಟೆ ಪ್ರದೇಶವು ಆರ್.ಎಂ.ಪಿ. – 2015 ರಂತೆ ಪ್ರಶ್ನಿತ ಪ್ರದೇಶವು ವಸತಿ (ಮುಖ್ಯ) ಉಪಯೋಗಕ್ಕಾಗಿ ವರ್ಗೀಕರಿಸಿದೆ ಎಂದು ಪ್ರಾಧಿಕಾರದ ನಗರ ಯೋಜನಾ ಸದಸ್ಯರು ವರದಿ ನೀಡಿರುತ್ತಾರೆ.

ಬೆಂಗಳೂರು ದಕ್ಷಿಣ ತಾಲ್ಲೂಕು ಉತ್ತರಹಳ್ಳಿ, ಉತ್ತರಹಳ್ಳಿ ಗ್ರಾಮದ ಸರ್ವೆ ನಂ.89 ರಲ್ಲಿನ 01 ಎಕರೆ 20 ಗುಂಟೆ ಜಾಗವನ್ನು ಕರ್ನಾಟಕ ಆದಾಯ ತೆರಿಗೆ ಇಲಾಖೆ ಗೃಹ ನಿರ್ಮಾಣ ಸಹಕಾರ ಸಂಘದ ಪರವಾಗಿ ಗೌರವ ಕಾರ್ಯದರ್ಶಿ ರವರಿಗೆ ಬದಲಿ ಜಾಗವನ್ನಾಗಿ ಹಂಚಿಕೆ ಮಾಡಲು ಆಯುಕ್ತರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಇವರು ಅನುಮೋದನೆ ನೀಡಿರುತ್ತಾರೆ. ಅದರಂತೆ ಕರ್ನಾಟಕ ಆದಾಯ ತೆರಿಗೆ ಇಲಾಖೆ ಗೃಹ ನಿರ್ಮಾಣ ಸಹಕಾರ ಸಂಘದ ಪರವಾಗಿ ಗೌರವ ಕಾರ್ಯದರ್ಶಿರವರಿಗೆ ದಿನಾಂಕ:14.07.2021 ರಂದು ಹಂಚಿಕೆ ಪತ್ರವನ್ನು ನೀಡಿ ದಸ್ತಾವೇಜು ಸಂಖ್ಯೆ:1281 ದಿನಾಂಕ:31.07.2021 ರಂದು ಶುದ್ಧಕ್ರಯ ಪತ್ರವನ್ನು ನೊಂದಾಯಿಸಿಕೊಡಲಾಗಿರುತ್ತದೆ.

ಕರ್ನಾಟಕ ಆದಾಯ ತೆರಿಗೆ ಇಲಾಖೆ ಗೃಹ ನಿರ್ಮಾಣ ಸಹಕಾರ ಸಂಘದ ಪರವಾಗಿ ಗೌರವ ಕಾರ್ಯದರ್ಶಿರವರಿಗೆ ಬೆಂಗಳೂರು ದಕ್ಷಿಣ ತಾಲ್ಲೂಕು ಉತ್ತರಹಳ್ಳಿ ಹೋಬಳಿ, ಉತ್ತರಹಳ್ಳಿ ಗ್ರಾಮದ ಸರ್ವೆ ನಂ.89 ರಲ್ಲಿನ 01 ಎಕರೆ 20 ಗುಂಟೆ ಜಾಗವನ್ನು ಬದಲಿ ಜಾಗವನ್ನಾಗಿ ಹಂಚಿಕೆ ಮಾಡುವ ಬಗ್ಗೆ ಪ್ರಾಧಿಕಾರದ ಮಟ್ಟದಲ್ಲಿ ತೀರ್ಮಾನಿಸಿ, ಸೂಕ್ತ ಅಧಿಕಾರತ್ವದ ಅನುಮೋದನೆ ಪಡೆದುಕೊಂಡು ನಿಯಮಾನುಸಾರ ಬದಲಿ ಜಾಗವನ್ನು ಹಂಚಿಕೆ ಮಾಡಲಾಗಿರುತ್ತದೆ.

---

**ನಅಇ 332 ಬೆಂಭೂಸ್ವಾ 2022**

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ